ಧಾರವಾಡ ಜಿಲ್ಲೆಯಲ್ಲಿ ಹೊಸ ರಸ್ತೆಗಳ ನಿರ್ಮಾಣ

185 - ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಹೊಸ ರಸ್ತೆಗಳ ನಿರ್ಮಾಣ ಮಾಡುವ ಬೇಡಿಕೆ ಲೋಕೋಪಯೋಗಿ ಇಲಾಖೆಯಲ್ಲಿ ಇದೆಯೇ, ಇದ್ದರೆ ಯಾವ ರಸ್ತೆಗಳ ವಿವರ ನೀಡುವುದು?

ಆ) ಅಮರಗೋಳದಿಂದ ಮಾರಡಗಿ (ಹೆಬ್ಬಳ್ಳಿ) ನಡುವಿನ ರಸ್ತೆ ನಿರ್ಮಾಣ ಮಾಡುವ ಯೋಜನೆ ಸರ್ಕಾರವು ಉದ್ದೇಶಿಸಿದೆಯೆ.

ಇ) ಈ ರಸ್ತೆ ನಿರ್ಮಾಣದಿಂದ ಏಷ್ಯಾದಲ್ಲಿಯೇ ದೊಡ್ಡದಾದ ಬಸವೇಶ್ವರ ಮಾರುಕಟ್ಟೆ (ಅಮರಗೋಳ)ಕ್ಕೆ ಬರಲು ಧಾರವಾಡ ಮತ್ತು ನವಲಗುಂದ ತಾಲ್ಲೂಕಿನ ಅನೇಕ ಗ್ರಾಮಗಳಿಗೆ ಬಹಳ ಸಮೀಪ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಧಾರವಾಡ ಜಿಲ್ಲೆಯಲ್ಲಿ ಹೊಸ ರಸ್ತೆಗಳ ನಿರ್ಮಾಣ ಮಾಡುವ ಬೇಡಿಕೆ ಲೋಕೋಪಯೋಗಿ ಇಲಾಖೆಯಲ್ಲಿ ಇರುವುದಿಲ್ಲ.

ಆ) ಅಮರಗೋಳದಿಂದ ಮಾರಡಗಿ (ಹೆಬ್ಬಳ್ಳಿ) ವರೆಗೆ ಒಂದು ಕಚ್ಚಾ ರಸ್ತೆ ಇದ್ದು, ಇದರ ಅಭಿವೃದ್ಧಿ ಹಾಗೂ ಸೇತುವೆ ನಿರ್ಮಾಣ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುತ್ತದೆ. ಈ ರಸ್ತೆಯ ಅಭಿವೃದ್ಧಿಯ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ. ಸರ್ಕಾರದ ಗಮನಕ್ಕೆ ಬಂದಿದ್ದು.

ಇ) ಸದರಿ ರಸ್ತೆಯ ಅಭಿವೃದ್ಧಿ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾ ಪಂಚಾಯತಗೆ ಸೂಚಿಸಲಾಗುವುದು.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಯೋಜನೆಗಾಗಿ ಬಂದ ವಿದೇಶಿ ಕಂಪನಿಗಳು.

186 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಿದ್ಯುತ್ ಉತ್ಪಾದನೆ ಯೋಜನೆಗಳನ್ನು ಪ್ರಾರಂಭಿಸಲು ವಿದೇಶೀ ಕಂಪನಿಗಳು ಮುಂದೆ ಬಂದಿರುತ್ತವೆ. (ಕಂಪನಿಗಳ ಹೆಸರು ಮತ್ತು ವಿವರಗಳನ್ನು ಒದಗಿಸುವುದು)

ಆ) ಹಿಂದಿನ ಸರ್ಕಾರ ಇಂತಹ ಯಾವ ಯಾವ ವಿದೇಶಿ ಕಂಪನಿಗಳಿಗೆ ಯೋಜನೆ ಪ್ರಾರಂಭಿಸಲು ಅನುಮತಿ ನೀಡಿತ್ತು.

ಇ) ಈಗಿನ ಸರ್ಕಾರ ಈ ವಿಷಯದಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ?

ಈ) ಈ ಯೋಜನೆಗಳ ಮೊತ್ತವೆಷ್ಟು ಹಾಗೂ ರಾಜ್ಯ ಸರ್ಕಾರವು ಈ ಯೋಜನೆಯನ್ನು ಪ್ರಾರಂಭಿಸುವ ವಿದೇಶೀ ಕಂಪನಿಗಳಿಗೆ ಯಾವ ಯಾವ ರೀತಿಯ ನೆರವನ್ನು ಒದಗಿಸಿದೆ?

ಉ) ಈ ಯೋಜನೆಗಳಿಂದ ರಾಜ್ಯಕ್ಕೆ ಎಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆಯಾಗುವುದು.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಅನುಬಂಧದಲ್ಲಿರುವಂತೆ

ಆ) 1) ಕೊಜೆಂಟ್ರಿಕ್ಸ್ ವಿದ್ಯುಚ್ಛಕ್ತಿ ಕಂಪನಿ, ಯು.ಎಸ್.ಎ. (ಮಂಗಳೂರು ವಿದ್ಯುತ್ ಕಂಪನಿ) ಮಂಗಳೂರಿನ ನಂದಿಕೂರಿನಲ್ಲಿ

2) ಹೆಚ್.ಓ.ಕೆ. ಇಂಟರ್ ನ್ಯಾಷನಲ್ ಲಿ. ಯು.ಎಸ್.ಎ. ಹೊಸಪೇಟೆ. (ಡೆಕ್ಕನ್ ಪವರ್ ಕಂ.)

3) ದಿ. ಎಷಿಯಾ ಪವರ್ ಕಂಪನಿ, ಯು.ಎಸ್.ಎ. (ಚಾಮುಂಡಿ ಪವರ್ ಕಾರ್ಪೊರೇಷನ್) ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ನಾರಾಯಣಪುರ ಮತ್ತು ತಮನಕಲ್

4) ದಿ. ಜಿಂದಾಲ್ ಟ್ರ್ಯಾಕ್ಟಬಲ್ ಪವರ್ ಕಾರ್ಪೊರೇಷನ್ ಲಿ., ಬೆಲ್ಲಿಯಂ (ಬಳ್ಳಾರಿ ಜಿಲ್ಲೆಯ ತೆರಂಗಲ್ಲುವಿನಲ್ಲಿ).

5) ಐ.ಪಿ.ಎಸ್., ಯು.ಎಸ್.ಎ.-ಬೆಂಗಳೂರು ಗ್ರಾಮೀಣ ಜಿಲ್ಲೆಯ ದೇವನಗುಂಟೆಯಲ್ಲಿ

6) ನಾರ್ತ್ ಈಸ್ಟ್ ಎನರ್ಜಿ ಸರ್ವಿಸಸ್ ಲಿ, ಹಾರಂಗಿ, ನುಗು.

ಇ) ಹಿಂದಿನ ಸರ್ಕಾರವು ಅನುಸರಿಸಿದಂತೆಯೇ ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ಕ್ಷೇತ್ರದವರು ಪಾಲ್ಗೊಳ್ಳುವ ದಿಸೆಯಲ್ಲಿ ಪ್ರಸ್ತುತ ಸರ್ಕಾರವು ಸಹ ಅದೇ ನೀತಿಯನ್ನು ಮುಂದುವರೆಸಿಕೊಂಡು ಬಂದಿದೆ.

ಈ) ಪಿಪಿಎ ಒಡಂಬಡಿಕೆಯನ್ನು ಸದರೀ ಕಂಪನಿಗಳೊಂದಿಗೆ ಮಾಡಿಕೊಳ್ಳಲಾಗುತ್ತಿದೆ. ಕೇಂದ್ರೀಯ ವಿದ್ಯುತ್ ಪ್ರಾಧಿಕಾರಿನಿಂದ ಟೆಕ್ನೋ-ಏಕನಾಮಿಕ್ ಕ್ಲಿಯರೆನ್ಸ್ ದೊರೆತ ನಂತರ ಪ್ರತಿಯೊಂದು ಯೋಜನೆಗಳ ಬಾಬ್ತು ತಿಳಿಯುತ್ತದೆ. ಸದರೀ ಕಂಪನಿಗಳಿಂದ ಪ್ರಾರಂಭಿಸಲಾಗುತ್ತಿರುವ ಈ ಯೋಜನೆಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸುವಲ್ಲಿ ಪ್ರಸ್ತುತ ಸರ್ಕಾರವು ಸಹಕರಿಸುತ್ತದೆ.

ಉ) ಈ ಯೋಜನೆಗಳಿಂದ ರಾಜ್ಯಕ್ಕೆ ಸುಮಾರು ಒಟ್ಟು 2782 ಮೆಗಾವ್ಯಾಟ್‌ನಷ್ಟು ವಿದ್ಯುತ್ ಹೆಚ್ಚುವರಿಯಾಗಿ ಲಭ್ಯವಾಗುವ ನಿರೀಕ್ಷೆ ಇದೆ.

ANNEXURE

1)	YTL Corporation Bernad	- Chamalapur,Hospet, Mangalore.
2)	Grandas(Singapure)	- Mangalore.
3)	Indo Gulf Fertilisers& Chemicals Corporation.	- Mangalore.
4)	Chigago Power Inc. USA	- Chamalapur & Mysore City
5)	Hyundai Corporation, South Korea	- Chamalapure orelsewhere
6)	Kontek Abbabi,Malaysia	- Chamalapur, Yelehanka
7)	Coastal Power production, Texas, USA	- Not indicated.
8)	OKI Industry Ltd, Thailand	- Mysore & Mangalore.
9)	NRICC,Ne Jersy, USA	- Mangalore.
10)	Harza Eng,Co.,USA	- Shivasamudram, Beathi
11)	Voest Aphine Machinery Construction Engg. Austria	- Sonapadi
12)	CEECRO-Chicago Engg.Co. USA	- Bhatkal, Holenarasipura.
13)	Miza International, Switzerland	- Dakshina kannada
14)	Heat Research Corpn.Tesaa.USA	- North Karnataka
15)	Asian Printers, Malaysia	- Not specified.
16)	Honston Industries Energy India Inc.	- Karwar.
17)	Riehimen Power Corpn.	- Srinivasapura
18)	Benham Holway Power Group Oklama Tulsa	- Dandeli, Kalinadi, Bedthi, Sharavathi, Sanapaedi, Almatti,Nahedegi

19)	Lewis Staley Associates Inc	-	Not indicated.
20)	Syed Khalil Dubai	-	Hospet
21)	Asia Power Gen.International U.S.A.	-	Bangalore.
22)	India Power Partners, Consortium	-	Not specified.
23)	John Brown/VMP Oil Co., Trafalga House.	-	Near Karwar
24)	Public Power International USA	-	Raichur, Chamalapur.
25)	Caithness, USA	-	Bedthi, Dandeli
26)	Condotte, Italy	-	Shivasamudram.

ರೀಮೇಕ್ ಚಿತ್ರಗಳಿಗೆ ಸಬ್ಸಿಡಿ ರದ್ದತಿ

187 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೀರಾದ್) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಚಲನಚಿತ್ರಗಳಿಗೆ ಈಗ ಎಷ್ಟು ಮೊತ್ತದ ಸಹಾಯಧನವನ್ನು ನೀಡಲಾಗುತ್ತಿದೆ?

ಆ) ಸಹಾಯಧನ ನೀಡಲು ಯಾವ ಯಾವ ಕ್ರಮಗಳನ್ನು ಅನುಸರಿಸಲಾಗುತ್ತಿದೆ?

ಇ) ಇತ್ತೀಚೆಗೆ ಕನ್ನಡದ ಮೂಲ ಕಥೆಗಳು ಕಡಿಮೆಯಾಗಿ ಪರಭಾಷೆಯ ರಿಮೇಕ್ ಚಿತ್ರಗಳ ಹಾವಳಿ ಹೆಚ್ಚಾಗುತ್ತಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಕನ್ನಡದಲ್ಲಿರುವ ಉತ್ತಮ ಕಥೆಗಳು ಚಲನಚಿತ್ರವಾಗಲು ಸಹಾಯ ಮಾಡುವ ಸಲುವಾಗಿ ಪರಭಾಷೆಯಿಂದ ರಿಮೇಕ್ ಆದ ಚಿತ್ರಗಳಿಗೆ ಸಹಾಯಧನ ನಿಲ್ಲಿಸಲಾಗುವುದೇ?

ಉ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ವಾರ್ತಾ ಪ್ರಚಾರ ಸಚಿವರು) :

ಅ) ಕನ್ನಡ ಚಲನಚಿತ್ರಗಳಿಗೆ 4 ಲಕ್ಷ ರೂ. ಸಹಾಯಧನ ನೀಡಲಾಗುತ್ತಿದೆ. ಕಲಾತ್ಮಕ ಚಿತ್ರವೆಂದು ಪರಿಗಣಿಸಲ್ಪಟ್ಟ ಚಿತ್ರಕ್ಕೆ 1.00 ಲಕ್ಷ ರೂ. ಹೆಚ್ಚುವರಿ ಸಹಾಯಧನ ನೀಡಲಾಗುತ್ತಿದೆ.

ಆ) ಚಲನಚಿತ್ರ ತಯಾರಿಸುವ ಮುಂಚೆ ಇಲಾಖೆಗೆ ತಿಳಿಸಿ ರಾಜ್ಯದಲ್ಲಿ ಕನಿಷ್ಠ ಶೇ. 85ರ ಚಿತ್ರೀಕರಣ ನಡೆಸಬೇಕು. ಸೆನ್ಸಾರ್ ಆದಬಳಿಕ 3 ತಿಂಗಳೊಳಗೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ವಿವರವಾದ ನಿಯಮಾವಳಿಗಳನ್ನು ರಚಿಸಲಾಗಿದೆ.